**<u>ಅಪರ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ</u>**

**<u>ಪ್ರಕರಣ ಸಂಖ್ಯೆ: ಸಿ.ಸಿ./1517/2022</u>**

ದಿನಾಂಕ: **13.12.2024**

(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಡಿಡಬ್ಲ್ಯೂ: **1** (ಆರೋಪಿ)

| | | |
|---|---|---|
| ಹೆಸರು | : | ಮಂಜುನಾಥ್ |
| ತಂದೆಯ ಹೆಸರು | : | ಕೆಂಪೇಗೌಡ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ದರ್ಜಿ |
| ವಾಸ ಸ್ಥಳ | : | ಕನಕನಗರ, ಚನ್ನಪಟ್ಟಣ |

<u>ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ಪಿ.ಡಿ. ವಕೀಲರಿಂದ:</u>

**1.** ಪಿರ್ಯಾದಿ ಯಾರು ಎಂದು ನನಗೆ ಗೊತ್ತಿಲ್ಲ. ಅವರಿಂದ ನಾನು ಯಾವುದೇ ಹಣವನ್ನು ಸಾಲ ಪಡೆದುಕೊಂಡಿಲ್ಲ. ಸದರಿ ಸಾಲದ ತೀರುವಳಿಗಾಗಿ ಯಾವುದೇ ಚೆಕ್ಕನ್ನು ನೀಡಿಲ್ಲ. ಜಯರಾಜ್ ಎಂಬುವವರ ಬಳಿ ನಾನು ಎರಡು ಚೀಟಿಗಳನ್ನು ಹಾಕಿದ್ದೆ. ಸದರಿ ಚೀಟಿಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಜಯರಾಜ್ ರವರು ಚೆಕ್ಕನ್ನು ಕೇಳಿದರು. ನಾನು ಮೂರುಚೆಕ್ಕು ಹಾಗೂ ಮೂರು ಬಾಂಡ್ ಪೇಪರ್ ಗಳನ್ನು ನೀಡಿದ್ದೇನೆ. ಅದರಲ್ಲಿ ಏನು ಬರೆದಿಲ್ಲ. ನಾನು ಫೋನ್ ಪೇ, ಗೂಗಲ್ ಪೇ ಹಾಗೂ ಕೆಲವು ಬಾರಿ ನಗದು ರೂಪದಲ್ಲಿ ನಾನು ತೆಗೆದುಕೊಂಡ ಚೀಟಿ ಹಣ ತೀರಿಸಿದ್ದೇನೆ. ಈ ಬಗ್ಗೇ ನನ್ನ ಬಳಿ ದಾಖಲಾತಿ ಇವೆ. ನಾನು ವಾಸವಿರುವ ವಿಳಾಸ ಕನಕನಗರ, 31ನೇ ವಾರ್ಡ, ಚನ್ನಪಟ್ಟಣ ಟೌನ್ ಆಗಿರುತ್ತದೆ. ನಾನು ಚೀಟೀ ಹಣವನ್ನು ಸಂಪೂರ್ಣವಾಗಿ ತೀರುವಳಿ ಮಾಡಿದ ನಂತರ ನಾನು ನೀಡಿದ ಚೆಕ್ಕನ್ನು ವಾಪಸ್ಸು ಕೇಳಿರುತ್ತೇನೆ. ಜಯರಾಜ್ ರವರು ನಂತರ ನೀಡುವುದಾಗಿ ತಿಳಿಸಿದ್ದರು. ಮತ್ತೆ ಇನ್ನು ಸ್ವಲ್ಪ ಹಣ ಬಾಕಿ ಇದೆ ಎಂದು ಹೇಳಿದಾಗ ಸದರಿ ಹಣವನ್ನೂ ಸಹ ನಾನು ಫೋನ್ ಪೇ ಮೂಲಕ ಎರಡು ವರ್ಷಗಳ ಹಿಂದೆ ಮರುಪಾವತಿ ಮಾಡಿದ್ದೇನೆ. ಪಿರ್ಯಾದಿ ಹಾಗೂ ಜಯರಾಜ್ ರವರಿಗೆ ನಾನು ಯಾವುದೇ ಹಣ ಕೊಡುವ ಹಾಗಿಲ್ಲ. ನನ್ನ ಮೇಲೆ ಸುಳ್ಳು ಆರೋಪ ಮಾಡಿದ್ದಾರೆ. ಹಾಗಾಗಿ ಈ ಪ್ರಕರಣದಿಂದ ನನ್ನನ್ನು ಮುಕ್ತಿಗೊಳಿಸಬೇಕಾಗಿ ಕೋರಿಕೊಳ್ಳುತ್ತಿದ್ದೇನೆ.

**(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ</u>